## ಸಮುದ್ರ ಮಥನ



### ಸಮಗ್ರ ಮಾಹಿತಿ

'ಮಕ್ಕಳ ಕಣ್ಣು ಹುಷಾರ್!' ಪ್ರವೀಣ ಕುಲಕರ್ಣಿ ಅವರ ಮುಖಪುಟ ಲೇಖನ (ಸುಧಾ, ಸೆ. 7) ಮಕ್ಕಳಿಗೆ ಎಚ್ಚರಿಕೆಯ ಸಂದೇಶ ನೀಡಿದೆ. ಜನ್ಮಜಾತ ಸಮಸ್ಯೆ, ಚಿಕ್ಕ ಮಕ್ಕಳಲ್ಲಿ ಅಂಧತ್ವ, ಎಲೆಕ್ಟ್ರಾನಿಕ್ಸ್ ಸಾಧನಗಳಿಂದ ಕಣ್ಣಿಗಾಗುವ ತೊಂದರೆ, ಮುನ್ನೆಚ್ಚರಿಕೆ ಕ್ರಮ ಹಾಗೂ ಕನ್ನಡಕಗಳ ಉಪಯೋಗದ ಬಗ್ಗೆ ಲೇಖನ ಸಮಗ್ರ ಮಾಹಿತಿ ನೀಡಿದೆ.

—ಗಾಣಧಾಳು ರಾಮಣ್ಣ ಚಿತ್ರದುರ್ಗ, ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ, ಸು.ವಿಜಯಲಕ್ಷ್ಮಿ ಶಿವಮೊಗ್ಗ, ಎಸ್.ಲಕ್ಷ್ಮೀನರಸಿಂಹ ಚಾಮರಾಜನಗರ, ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ಬಿ.ಎನ್.ಸೊಲ್ಲಾಪುರೆ ಕಮಲನಗರ, ಎಚ್.ಆನಂದಕುಮಾರ್ ಚಿತ್ರದುರ್ಗ, ಮಹಾವೀರ ಕಾಸರ ಶಿವಮೊಗ್ಗ, ಸಿ.ಪಿ.ಕೆ. ಮೈಸೂರು

### ಮನಮುಟ್ಟುವಂತಾಗಲಿ

ದೀಪಾವಳಿ ಹಬ್ಬ ಹತ್ತಿರ ಬರುತ್ತಿದೆ. ಮಕ್ಕಳ ಕಣ್ಣು ಬಗ್ಗೆ ಲೇಖನ ಸಮಯಕ್ಕೆ ಸರಿಯಾಗಿ ಪ್ರಕಟ ಮಾಡಿದ್ದೀರಿ. ಹಿರಿಯರು ಮಕ್ಕಳ ಕಣ್ಣುಗಳ ಬಗ್ಗೆ ಜಾಗ್ರತೆ ವಹಿಸುವ ವಿಚಾರ ಎಲ್ಲ ಹೆತ್ತವರ ಮನಮುಟ್ಟುವಂತಾಗಲಿ.

— ಅಂಚೆ ಸುಬ್ರಮಣ್ಯ, ಕೊಪ್ಪ

### ಸ್ವಾರಸ್ಯಕರ

ವಿಚಾರ ಲಹರಿಯಲ್ಲಿ 'ಅನುಭವಕ್ಕೆ ಅರ್ಥ ಇಲ್ಲ' (ತೋಷ) ಬರಹ ಅನುಭವದ ಬಗ್ಗೆ ವಿಶ್ಲೇಷಣೆ ನೀಡಿದ್ದು ಸ್ವಾರಸ್ಯಕರವಾಗಿತ್ತು.

—ಬಂಟ್ವಾಳ ಸೂರ್ಯನಾರಾಯಣರಾವ್ ಮಂಡ್ಯ

### ಚರ್ಚೆಗೆ ಗ್ರಾಸ

'ನಿಮ್ಮೊಡನೆ'ಯಲ್ಲಿ 'ಲಿಂಗ ಅಸಮಾನತೆಗೆ ಕೊನೆಯೆಂದು?' (ಸುಧಾ ಹೆಗಡೆ) ಬರಹ ಚಿಂತನಾರ್ಹವಾಗಿದ್ದು ಚರ್ಚೆಗೆ ಗ್ರಾಸ ಒದಗಿಸಿದೆ.

—ಸುಂದರ್ ಬೆಂಗಳೂರು

### ಗಣ್ಯರೂ ಎಡಚರು

'ಹೌದು, ನಾವು ಎಡಚರು!' (ಲತಾ ಹೆಗಡೆ) ಲೇಖನ ಚೆನ್ನಾಗಿದೆ. ವಿಶ್ವದ ಶ್ರೇಷ್ಠ ಮುತ್ಸದ್ದಿಗಳನೇಕರು ಎಡಚರಾಗಿದ್ದು, ದೇಶ ಸೇವೆ ಸಲ್ಲಿಸಿ ಗಣ್ಯರೆನಿಸಿಕೊಂಡಿದ್ದಾರೆ.

—ಎ.ಕೆ. ಪಟ್ಟಾಭಿ ಬೆಂಗಳೂರು, ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

### ಲೇಖನ ಸಮಸ್ಯೆ ಹಗುರವಾಗಿಸಿತು

ಎಡಚರ ಬಗ್ಗೆ ಬರೇ ಸುತ್ತಮುತ್ತ ಕಂಡು ಕೇಳಿ ಗೊತ್ತಿದ್ದ ನನಗೆ, ನನ್ನ ಮಗನೂ ಎಡಚ ಎಂದು ಗೊತ್ತಾದಾಗ ಆಶ್ಚರ್ಯ ಆಯಿತು. ಏಕೆಂದರೆ ನಮ್ಮಿಬ್ಬರ ಕುಟುಂಬದಲ್ಲಿ ಯಾರೂ ಗಮನಿಸುವಷ್ಟು ಎಡಚರು ಇಲ್ಲ. ಅವನು ದಿನನಿತ್ಯದ ಹೆಚ್ಚಿನ ಚಟುವಟಿಕೆಗಳಿಗೆ ಎಡಕೈಯನ್ನೇ ಬಳಸುವುದರಿಂದ, ವಿಶೇಷ ಸಂದರ್ಭಗಳಲ್ಲಿ ಅವನನ್ನು ವಿಚಿತ್ರ ದೃಷ್ಟಿಯಿಂದ ನೋಡುತ್ತಾರೆ. 'ಕೊನೆ ಪಕ್ಷ ಊಟವನ್ನಾದರೂ ಬಲಗೈಯಲ್ಲಿ ಮಾಡುವಂತೆ ಹೇಳಿ' ಎಂದು ಸಲಹೆ ಕೊಡುವವರೇ ಬಹಳ.

ನನ್ನ ಮಗನಿಗೆ ಈಗ 4 ವರ್ಷ. ಈಗಾಗಲೇ ಸಾಕಷ್ಟು ಅವಮಾನ,ಚುಚ್ಚುಮಾತುಗಳನ್ನು ಕೇಳಿಸಿಕೊಂಡಿದ್ದೇನೆ. ಆದರೆ ಬದಲಾವಣೆಗಾಗಿ ಯಾವುದೇ ಹೇರಿಕೆ ಮಾಡದೆ ಅವನನ್ನು ಅವನಾಗಿಯೇ ಇರುವಂತೆ ಬಿಟ್ಟುಬಿಟ್ಟಿದ್ದೇನೆ. ಎಲ್ಲರೊಡನೆ ಹೇಳಿಕೊಳ್ಳಲಾಗದ ಈ ಅನಿಸಿಕೆಯನ್ನು 'ಎಡಚರು...' ಲೇಖನದಿಂದಾಗಿ ಹೇಳಿಕೊಂಡು ಹಗುರವಾಗಲು ಸಾಧ್ಯವಾಗಿದೆ.

— ಶ್ರೀರಂಜನಿ ಬೆಂಗಳೂರು

### ಪ್ರವಾಸ ಲೇಖನ

ಪ್ರವಾಸ ಲೇಖನ 'ಹಿಮಾಲಯದ ಹಳ್ಳಿಗೆ ಚಳಿಗಾಲದ ಚಾರಣ' (ನೆಂಪು ಗುರು) ಚೆನ್ನಾಗಿದೆ. ಅತಿ ಹೆಚ್ಚು ಹಿಮಾವೃತ ಪ್ರದೇಶದಲ್ಲಿ ಚಾರಣ ನಡೆಸಿ ಸುಮದೊ ಯಂಗ್ರಾಂಗ್ ನಂತಹ ನಿರ್ಜನ ಹಿಮ ಪ್ರದೇಶಗಳಲ್ಲಿ ನಡೆದಾಡಿದ ಅನುಭವಗಳನ್ನು ಸೊಗಸಾಗಿ ಹಂಚಿಕೊಂಡಿದ್ದಾರೆ. ಲೇಹ್ ಲಡಾಕ್‌ನ ಪ್ರವಾಸ ಮಾಡುವವರಿಗೆ ಈ ಲೇಖನವು ಸ್ಫೂರ್ತಿದಾಯಕವಾಗಿದೆ.

—ಸಿ.ಜಯಶ್ರೀ ಮಠಪತಿ ಬೆಂಗಳೂರು, ರತ್ನಾಕರ ಹೆಗಡೆ ಮೂಡುಬಿದರೆ

### ಬದುಕುವ ಚಿತ್ರಣ

'ನಂಬಿಕೆ ಎಂಬ ಗುರಾಣಿ ಹಿಡಿದು..' (ಎಚ್.ಕೆ. ಶರತ್) ಲೇಖನ ಓದಿದಾಗ ಬದುಕುವ ಚಿತ್ರಣ ವಿಚಿತ್ರವೆನಿಸಿತು.

—ರಾಜಶೇಖರ ಹಾದಿಮನಿ ಧಾರವಾಡ

### ಖುಷಿಕೊಟ್ಟಿತು

'ಸವಿ ಸವಿ ನೆನಪು' ಅಂಕಣದಲ್ಲಿ 'ನೆನಪಿನ ದೋಣಿಯಲಿ' (ಶಾರದಾ ವಿ.ಮೂರ್ತಿ) ಅವರ ನೆನಪು ಖುಷಿಕೊಟ್ಟಿತು.

—ರವೀಂದ್ರನಾಥ ಶಿ. ಯಡಹಳ್ಳಿ

### ಕಥೆ ಮನಕಲಕುವಂತಿದೆ

'ಬಡಾ ಬಾವಡಿ' (ನಾ.ಡಿಸೋಜ) ಕಥೆ ನಿಜಕ್ಕೂ ಮನಕಲಕುವಂತಿದೆ.

—ಎಸ್. ಜ್ಞಾನಸುಂದರ್ ಬೆಂಗಳೂರು, ಎಸ್.ವಿಜಯಕುಮಾರಿ ಬೆಂಗಳೂರು, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ, ಕೊಹಿಮ ಬಸರಕೋಡು

### ತಪ್ಪಾಗಿ ಪ್ರಕಟವಾಗಿದೆ

ವಿಚಾರ ಲಹರಿಯಲ್ಲಿ ಮೂಚಿ ಅವರು 'ಲಿಂಗಾಯತ ಧರ್ಮ' (ಸುಧಾ ಆಗಸ್ಟ್ 31ರ ಸಂಚಿಕೆ)ದ ಅರ್ಥಪೂರ್ಣ ವಿಚಾರಗಳನ್ನು ಮಂಡಿಸಿದ್ದನ್ನು ಮೆಚ್ಚಿ ಕೆಲ ಓದುಗರು ಪ್ರತಿಕ್ರಿಯಿಸಿದ್ದರು. ಸಮುದ್ರ ಮಥನ (ಸೆ.10 ಸಂಚಿಕೆ)ದಲ್ಲಿ ಪ್ರಕಟವಾದ ಈ ಪ್ರತಿಕ್ರಿಯೆಯಲ್ಲಿ 'ಲಿಂಗಾಯತ ಧರ್ಮದ ಆಳಗಲವನ್ನು ಬೇರು ಮಟ್ಟದವರೆಗೂ ಚಿಂತನೆಗೆ ಹಚ್ಚಿ ವೀರಶೈವ ಹಾಗೂ ಲಿಂಗಾಯತ ಒಂದೇ' ಎನ್ನುವುದನ್ನು ಅದ್ಭುತವಾಗಿ ಚಿತ್ರಿಸಿದ್ದಾರೆ' ಎಂದು ತಪ್ಪಾಗಿ ಪ್ರಕಟವಾಗಿದೆ. ಇದು 'ವೀರಶೈವ ಹಾಗೂ ಲಿಂಗಾಯತ ಒಂದೇ ಅಲ್ಲ' ಎಂದಾಗಬೇಕಿತ್ತು. ಈ ಕಣ್ತಪ್ಪಿಗಾಗಿ ವಿಷಾದಿಸುತ್ತೇವೆ.

—ಸಂ




